ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ರಾಮನಗರ ನಗರಸಭೆಯಲ್ಲಿ ಕೋವಿಡ್-19ರ ಅವಧಿಯಲ್ಲಿ ಸಾರ್ವಜನಿಕವಾಗಿ ಯಾವುದೇ ಕೆಲಸಗಳು ಆಗಿದಿರುವ ಕುರಿತು

ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

928(1065) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಮನಗರ ನಗರಸಭೆಯಲ್ಲಿ ಕೋವಿಡ್-19ರ ಅವಧಿಯಲ್ಲಿ ಸಾರ್ವಜನಿಕಾಗಿ ಯಾವುದೇ ಕೆಲಸಗಳನ್ನು (ಕೋವಿಡ್ ಪ್ರಕರಣಗಳನ್ನು ಹೊರತುಪಡಿಸಿ) ಮಾಡದಿರಲು ಸರ್ಕಾರ ನಿರ್ಬಂಧ ವಿಧಿಸಿತ್ತೇ;

(ಆ) ಕೋವಿಡ್-2019ರ ಅವಧಿಯಲ್ಲಿ ಹೊಸದಾಗಿ ಮಾಡಿರುವ ಇ-ಖಾತೆಗಳು ಮತ್ತು ಕಟ್ಟಡ ನಿರ್ಮಾಣ ಮಾಡಲು ನೀಡಿರುವ ಪರವಾನಿಗೆಗಳ ಸಂಖ್ಯೆ ಎಷ್ಟು ;

(ಇ) ಅನಧಿಕೃತ ಸ್ವತ್ತುಗಳಿಗೆ ಇ-ಖಾತೆಯನ್ನು ತೆರೆಯಲು ಇರುವ ಮಾನದಂಡಗಳು ಅಥವಾ ನಿಯಮಾವಳಿಗಳೇನು;

(ಈ) ಪ್ರಸ್ತುತ ನಗರಸಭೆಯಲ್ಲಿ (ಕೋವಿಡ್ ಪ್ರಕರಣಗಳನ್ನು ಹೊರತುಪಡಿಸಿ) ಸಾರ್ವಜನಿಕರ ಕೆಲಸ-ಕಾರ್ಯಗಳನ್ನು ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೇ ?